**ಓ.ಎಸ್ ನಂಃ *330* /2019**

**ಪಿ .ಡಬ್ಲು-1**

ಸಾಕ್ಷಿಯನ್ನು ದಿನಾಂಕಃ 28.02.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು-ಪ್ರತಿವಾದಿ ಪರ ಶ್ರೀ. ಅರ್ ಎಸ್ ಎನ್ ವಕೀಲರಿಂದ**

ದಾವಾ ಸ್ವತ್ತನ್ನು ಯಾರಿಂದ ಖರೀದಿ ಮಾಡಿರುತ್ತೀರಿ ಎಂದರೆ ಡಿ ಅರ್ ಕೃಷ್ಣಮೂರ್ತಿ ರವರಿಂದ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂ ಎಷ್ಟು ಎಂದರೆ ಸರ್ವೆ ನಂ 13 ಎಂದು ನುಡಿಯುತ್ತಾರೆ. ಸರ್ವೆ ನಂ 13 ರಲ್ಲಿ ನೀವು ಖರೀದಿ ಮಾಡಿರುತ್ತೇನೆಂದು ಹೇಳುವ 1 ಎಕರೆ ಸ್ವತ್ತನ್ನು ಹೊರತುಪಡಿಸಿ ಉಳಿದ 1 ಎಕರೆ 10 ಗುಂಟೆ ಸ್ವತ್ತು ಯಾವ ದಿಕ್ಕಿಗೆ ಬರುತ್ತದೆ ಎಂದರೆ ನಮ್ಮ ಸ್ವತ್ತಿನ ಪಶ್ಚಿಮಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಯಾವ ದಿಕ್ಕಿಗೆ ಪ್ರತಿವಾದಿಯರ ಸ್ವತ್ತು ಬರುತ್ತದೆ ಎಂದರೆ ಪೂರ್ವಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪೂರ್ವಕ್ಕೆ ಹನುಮಂತರೆಡ್ಡಿ ರವರ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಿಂದ ಪೂರ್ವಕ್ಕೆ ಸರ್ವೆ ನಂ 13 ರ ಉಳಿಕೆ ಸ್ವತ್ತು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರ ಪುಟ 1 ರಿಂದ 3 ರಲ್ಲಿ ನಿಮ್ಮ ಸಹಿ ಇರುವುದಿಲ್ಲ ಎಂದರೆ ಸರಿ . ನಿಪಿ 5 ರಲ್ಲಿ ದಾವಾ ಸ್ವತ್ತು ಎಲ್ಲಿ ಬರುತ್ತದೆ ಎಂದು ಹೇಳುವಿರಾ ಎಂದರೆ ಇಲ್ಲ ಎಂದು ನುಡಿದು ಗ್ರಾಮ ನಖಾಶೆಯಲ್ಲಿ ಹೇಳುತ್ತೇನೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ನಿಮ್ಮ ಹೆಸರಿಗೆ ಖಾತೆ ಅಗಿರುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಖಾತೆಗೆ ಸಂಬಂದಿಸಿದಂತೆ ನೀವು ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂದಿಸಿದ ತೆರಿಗೆ ಸ್ವೀಕೃತಿ ರಶೀದಿಗಳನ್ನು ಹಾಗೂ ಖಾತಾ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ 13 ಮತ್ತು ಪ್ರತಿವಾದಿಯರಿಗೆ ಸೇರಿದ ಸರ್ವೆ ನಂ 6 ಅಕ್ಕಪಕ್ಕದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕ ಮಾಡಿ ದಾವಾ ಸ್ವತ್ತನ್ನು ಹಾಗೂ ಪ್ರತಿವಾದಿಯರ ಸ್ವತ್ತನ್ನು ಅಳತೆ ಮಾಡಿಸಿ ವರದಿಯನ್ನು ತರಿಸಿಕೊಳ್ಳಲು ನಿಮ್ಮ ಅಕ್ಷೇಪಣೆ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರಿಗೆ ಸೇರಿದ ಸರ್ವೆ ನಂ 6 ನ್ನು ಒಬ್ಬ ಹೆಚ್ ಎಸ್ ಜೋಸೆಪ್ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಸದರಿ ಜೋಸೆಪ್ ರವರು ರಾಮಪ್ಪ ರವರಿಂದ ಸರ್ವೆ ನಂಬರ್ 6 ರ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ನಿಮಗೆ ಸರ್ವೆ ನಂ 13 ರ ಸ್ವತ್ತನ್ನು ಮಾರಾಟ ಮಾಡಿರುತ್ತಾರೆಂದು ಹೇಳುವ ಡಿ ಅರ್ ಕೃಷ್ಣಮೂರ್ತಿ ರವರ ತಂದೆ ಸದರಿ ರಾಮಪ್ಪ ಎಂದರೆ ಸರಿ .



ನೀವು ಹೇಳುವ ಹಾಗೆ ದಾವಾ ಸ್ವತ್ತು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ ನಿಪಿ 1 ನ್ನು ಸೃಷ್ಟಿಪಡಿಸಿಕೊಂಡು ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರು ನಿಮಗೆ ಯಾವುದೇ ತೊಂದರೆ

ನೀಡದೇ ಇದ್ದರೂ ಸಹ ಅವರ ವಿರುದ್ದ ಸುಳ್ಳು ದಾವಾ ಹೂಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಪ್ರತಿವಾದಿಯರ ಸ್ವತ್ತಿನಲ್ಲಿ ಇರುವ ನೀಲಗಿರಿ ಮರಗಳನ್ನು ಕಟಾವು ಮಾಡಲು ಪ್ರಯತ್ನಿಸಿರುತ್ತೀರಿ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಯಾರು ತಯಾರು ಮಾಡಿರುತ್ತಾರೆ ಎಂದರೆ ನಮ್ಮ ವ ಕೀಲರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆಃ- ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)**

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/-**

**(ಮಂಜು ಎಂ)**

**2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್‌ಸಿ, ಕೆ.ಜಿ.ಎಫ್**